## ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ. ಶಿವಮೊಗ್ಗ:ತಾ


**ತರಗತಿ:4** **ವಿಷಯ:ಕನ್ನಡ** ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜಿ.

# ಕನ್ನಡಮ್ಮನ ಹರಕೆ

**ಕುವೆಂಪುರವರು ಬರೆದ ಈ ಪದ್ಯವನ್ನು ಹಾಡಿದವರು: ಕು:**
**ರಕ್ಷಿತಾ,ಲೇಖನ,ಹರ್ಷಿತಾ,ಹೇಮಲತಾ,ಪ್ರಾರ್ಥನಾ,ಸಹನಾ,ಸಿಂಚನಾ,ಪ್ರಥಮ್,ಸೃಜನ್**

**ಕೇಳಲು ಇಲ್ಲಿ ಕ್ಲಿಕ್ಕಿಸಿರಿ ಹಾಡನ್ನು**





ಪಾಠ – ೧
ಕನ್ನಡಮ್ಮನ ಹರಕೆ (ಪದ್ಯ)

V1T5C2

ಕಲಿಕೆಗೆ ದಾರಿ :
ಕನ್ನಡ ನಾಡಿನ ಬಗ್ಗೆ ನಿಮಗೆ ತಿಳಿದಿರುವ ಒಂದು ಹಾಡನ್ನು ತರಗತಿಯಲ್ಲಿ ರಾಗವಾಗಿ ಹಾಡಿರಿ.

ಕನ್ನಡಕೆ ಹೋರಾಡು
ಕನ್ನಡದ ಕಂದಾ;
ಕನ್ನಡವ ಕಾಪಾಡು
ನನ್ನ ಆನಂದಾ ।

ಜೋಗುಳದ ಹರಕೆಯಿದು
ಮರೆಯದಿರು, ಚಿನ್ನಾ;
ಮರೆತೆಯಾದರೆ ಅಯ್ಯೊ
ಮರೆತಂತೆ ನನ್ನ ।

ಮೊಲೆಯ ಹಾಲಿಂತಂತೆ
ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ
ಬಲುಸೊಗಸು ಮೆಯ್ಗೆ ।

ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ
ಇಹಪರಗಳೇಳ್ಗೆ ।

ದಮ್ಮಯ್ಯ ಕಂದಯ್ಯ
ಬೇಡುವೆನು ನಿನ್ನ;
ಕನ್ನಡಮ್ಮನ ಹರಕೆ,
ಮರೆಯದಿರು, ಚಿನ್ನಾ ।

ಮರೆತೆಯಾದರೆ ಅಯ್ಯೊ;
ಮರೆತಂತೆ ನನ್ನ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ ।

– ಕುವೆಂಪು